ಕರ್ನಾಟಕ ಲೋಕಾಯುಕ್ತ

ನಂ.ಲೋ.ಮೊ.ಸಂಖ್ಯೆ.25/2015.

ಪೊಲೀಸ್ ಇನ್ಸ್‌ಪೆಕ್ಟರ್-14 ರವರ ಕಚೇರಿ,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ,
ಎಂ.ಎಸ್.ಬಿಲ್ಡಿಂಗ್, ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 25.05.2016

ರವರಿಗೆ,
ಕಾರ್ಯಪಾಲಕ ಅಭಿಯಂತರರು,
ರಾಜರಾಜೇಶ್ವರಿ ನಗರ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು ನಗರ.

ಮಾನ್ಯರೇ,

ವಿಷಯ : ಕಾಮಗಾರಿ ನಿರ್ವಹಿಸಲು ಅನುಮತಿ ನೀಡುತ್ತಿರುವ ಬಗ್ಗೆ.

ಉಲ್ಲೇಖ: ಸಂಖ್ಯೆ:ಕಾಅ/ರಾರಾನವಿ/ಪಿಆರ್/112/16-17, ದಿ: 12.05.2016

* * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: 12.05.2016 ರಂದು ನೀವು ಈ ಕಛೇರಿಯಲ್ಲಿ ನೀಡಿರುವ ಪತ್ರದಲ್ಲಿ ವಾರ್ಡ್ ನಂ-17 ರಲ್ಲಿ Segregation ಕಟ್ಟಡದ ಕಾಮಗಾರಿ ನಿರ್ವಹಿಸಲು ಅನುಮತಿಯನ್ನು ಕೋರಿರುತ್ತೀರಿ. ಈ ವಿಷಯಕ್ಕೆ ಸಂಬಂಧಿಸಿದಂತೆ ತನಿಖಾ ಹಿತದೃಷ್ಟಿಯಿಂದ ಸದರಿ ಮೇಲ್ಕಂಡ ಕಾಮಗಾರಿ ಕೈಗೊಳ್ಳಲು ಯಾವುದೇ ಅಭ್ಯಂತರವಿರುವುದಿಲ್ಲ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಸತೀಶ್.ಬಿ.ಎಸ್)
ಪೊಲೀಸ್ ಇನ್ಸ್‌ಪೆಕ್ಟರ್
ಕರ್ನಾಟಕ ಲೋಕಾಯುಕ್ತ
ಬೆಂಗ[illegible]ನಗರ ವಿಭಾಗ
ಬೆಂ[illegible]ರು - 01

Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಾ.ರಾ.ನಗರ ವಿಭಾಗ, ಚೌಡೇಶ್ವರಿ ಬಸ್ ನಿಲ್ದಾಣ ಪಕ್ಕ,
ಮತ್ತಿಕೆರೆ, ಬೆಂಗಳೂರು.

ಸಂಖ್ಯೆ.ಕಾಅ/ರಾರಾನವಿ/ಪಿ.ಆರ್/112/16-17 ಬೆಂಗಳೂರು, ದಿನಾಂಕ:- 23/5/2016

ಇವರಿಗೆ,

ಪೊಲೀಸ್ ಅಧೀಕ್ಷಕರು
ಕರ್ನಾಟಕ ಲೋಕಾಯುಕ್ತ
ಬಹುಮಹಡಿ ಕಟ್ಟಡ
ಕೆ.ಆರ್.ವೃತ್ತ
ಬೆಂಗಳೂರು-560 001.

ಮಾನ್ಯರೇ,

ವಿಷಯ:- Remodelling of Segregation Point R.C.C Drain and Development of Water Body at J.P Park in Ward No.17.

ಉಲ್ಲೇಖ:- ತಮ್ಮ ಪತ್ರದ ಸಂಖ್ಯೆ. ಕ್ರ.ಸಂ. 2317

****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಕಟ್ಟಡದ ಅಂದಾಜು ಪಟ್ಟಿ ರೂ.75.00ಲಕ್ಷಗಳಿಗೆ ವಾರ್ಡ್ ಸಂಖ್ಯೆ.17ರಲ್ಲಿ ನಗರೋತ್ಥಾನದಲ್ಲಿ ಅನುಮೋದನೆಯಾಗಿರುತ್ತದೆ.

ಈ ಕಟ್ಟಡದ ಬಗ್ಗೆ ಶ್ರೀ ಶಿವಣ್ಣ ಲಗ್ಗೆರೆಯವರು ಹಳೆ Segregation ಕಟ್ಟಡದ ಕಾಮಗಾರಿ ಮೇಲೆ ಪುನಃ ಇನ್ನೊಂದು ಬಿಲ್ಲುಗಳು ಪಾವತಿ ಮಾಡುತ್ತಿದ್ದಾರೆಂದು ತಮ್ಮ ಕಛೇರಿಗೆ ದೂರು ನೀಡಿರುತ್ತಾರೆ.

ಈ ದೂರು ನೀಡಿದ ನಂತರ ತಮ್ಮ ಕಛೇರಿಯ I.O ರವರು ಈ ಕಾಮಗಾರಿ ಬಗ್ಗೆ ಪರಿವೀಕ್ಷಣೆ ಕೈಗೊಂಡಿರುತ್ತಾರೆ. ಪರಿವೀಕ್ಷಣೆ ಸಮಯದಲ್ಲಿ ಒಂದು ಹಳೇ ಕಟ್ಟಡವು 2012-13ರಲ್ಲಿ ಯೋಜನೆ ವಿಭಾಗದಿಂದ ಕಾಮಗಾರಿಯನ್ನು ನಿರ್ವಹಿಸಿ ಮುಕ್ತಾಯಿಸಿರುತ್ತಾರೆ ಹಾಗೂ ಸದರಿ ಕಟ್ಟಡವು Segregation ನಿರ್ವಹಣೆ ಮಾಡಲು ಚಿಕ್ಕದಾಗಿರುತ್ತದೆ ಹಾಗೂ ಇದಕ್ಕೆ extention ಮಾಡಲು 2014-15ನೇ ಸಾಲಿನ ನಗರೋತ್ಥಾನದಲ್ಲಿ ರೂ.75.00ಲಕ್ಷಕ್ಕೆ ಅನುದಾನವನ್ನು ನೀಡಿರುತ್ತಾರೆ. ಈ ಅನುದಾನಕ್ಕೆ ಅನುಗುಣವಾಗಿ ಹೊಸದಾಗಿ ಕಟ್ಟಡ extention ನಿರ್ಮಾಣ ಮಾಡಲು ಒಂದು ಅಂದಾಜು ಪಟ್ಟಿಯನ್ನು ರೂ.75.00 ಲಕ್ಷಕ್ಕೆ ತಯಾರಿಸಿ ದಿನಾಂಕ 07-5-2016ರಂದು ಮುಖ್ಯ ಇಂಜಿನಿಯರ್, ರಾಜರಾಜೇಶ್ವರಿ ನಗರ ವಲಯ ರವರಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ ತಾವು ಕೇಳಿರುವ ಕಾಮಗಾರಿಗಳಲ್ಲಿ ಈ ಹೊಸದಾಗಿ ನಿರ್ವಹಣೆ ಮಾಡಲು ತಾಂತ್ರಿಕ ಆಧಾರದ ಮೇಲೆ ನೀಡಿರುವ ಕಾಮಗಾರಿಗೆ ನೀಡಿರುವ ದೂರನ್ನು ಕೈ ಬಿಡಲು ಕೋರುತ್ತೇನೆ ಹಾಗೂ ಈಗಾಗಲೇ ಈ ಹಳೇ ಕಟ್ಟಡದ ಅಂದಾಜು ಪಟ್ಟಿ, ನಕ್ಷೆ, ಕಾಮಗಾರಿ ಮುಕ್ತಾಯಗೊಳಿಸಿದ Certificateನ್ನು ತಮ್ಮ ಮಾಹಿತಿಗಾಗಿ ಈ ಪತ್ರದ ಜತೆ ಲಗತ್ತಿಸಿದೆ.

ಇದು ತಮ್ಮ ದಯಾಪರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು
ರಾ.ರಾ.ನಗರ ವಿಭಾಗ

Scanned by CamScanner